**‘ನಾನು ವರ್ಜಿನ್ ಅಲ್ಲದಿದ್ದರೇನಾಯಿತು, ನಿನ್ನ ಗಂಡನೂ ಅಲ್ಲ ತಾನೇ’ ಅವಳು ಮೆಲ್ಲನೆ ಆಡಿದ್ದರೂ ಸ್ಪಷ್ಟವಾಗಿ ಕೇಳಿಸಿತ್ತು...**

ಸರಕಾರಕ್ಕೆ ಗೊತ್ತಾಗದಿದ್ದರೆ ಸರಿ. ನನಗೆ ಮಕ್ಕಳೆಂದರೆ ಇಷ್ಟ.” ಅವಳು ಮಾತನ್ನು ಮುಂದುವರಿಸಿ, “ರಿಷಿಕಾ, ನಿನಗೆ ಗೊತ್ತಾ ಎಂಟು ಹತ್ತು ವರ್ಷ ದುಡಿದು 650 ಸ್ಕ್ವೇರ್ ಫೀಟಿನ ಮನೆ ಕೊಂಡಿದ್ದೇನೆ. ಒಬ್ಬಳೇ ಮಗಳು ನಾನು, ಅಪ್ಪ ಅಮ್ಮನನ್ನು ನೋಡಿಕೊಂಡಿದ್ದೇನೆ”.

ಅಲ್ಲಿಂದ ಬೌದ್ಧ ದೇವಾಲಯವನ್ನು ನೋಡಲು ಹೊರಟೆವು. ದೇವಾಲಯದ ಎದುರುಗಡೆ ದೊಡ್ಡ ಅಗರಬತ್ತಿ ಸ್ಟ್ಯಾಂಡ್. ನಮ್ಮವರೂ ಅಗರಬತ್ತಿ ಕೊಂಡು ಹಚ್ಚಿದರು. ಶೆರ್ಲಿಯೂ ಅಗರಬತ್ತಿ ಹಚ್ಚಿ, ಕಣ್ಣು ಮುಚ್ಚಿ ಕೈ ಮುಗಿಯುವುದು ಕಾಣಿಸಿತು. “ಓ ಬುದ್ಧನ ಭಕ್ತಳು” ಎಂದು ಛೇಡಿಸಿದೆ. ಅದಕ್ಕವಳು, “ನೀನ್ಯಾಕೆ ಇಲ್ಲೇ ನಿಂತಿದ್ದಿ? ದೇವರ ಮೇಲೆ ಭಕ್ತಿ ಇಲ್ಲವೇ?” “ಇದೆ ಎಂದರೆ ಇದೆ, ಇಲ್ಲ ಎಂದರೆ ಇಲ್ಲ. ಮನಸ್ಸಿಗೆ ಆಸರೆ ಬೇಕೆನಿಸಿದಾಗ, ಮನಸ್ಸು ತಲ್ಲಣಿಸಿದಾಗ ಭಗವಂತನ ಮೊರೆ ಹೋಗುತ್ತೇನೆ. ನಿಮ್ಮಲ್ಲಿ ಎಲ್ಲರೂ ಬುದ್ಧನನ್ನು ಪೂಜಿಸುವವರೇ?” ಕೇಳಿದೆ. “ಹಾಗೇನೂ ಇಲ್ಲ, ಕ್ರಿಶ್ಚಿಯನ್ನರು, ಮುಸ್ಲಿಮರೂ ಇದ್ದಾರೆ. ದೇವರು ಇಲ್ಲ ಎನ್ನುವವರೂ ಸಾಕಷ್ಟು ದೊಡ್ಡ ಸಂಖ್ಯೆಯಲ್ಲಿದ್ದಾರೆ. ಸರಕಾರ ಅಧಿಕೃತವಾಗಿ ಯಾವ ಜಾತಿ, ಮತವನ್ನೂ ಗುರುತಿಸುವುದಿಲ್ಲ. ಪ್ರತಿಯೊಬ್ಬರೂ ಖಾಸಗಿಯಾಗಿ ಪ್ರಾರ್ಥಿಸಬಹುದು. ಇಲ್ಲಿರುವ ಬೌದ್ಧ ದೇವಾಲಯಗಳೆಲ್ಲಾ ಬಹಳ ಹಳೆಯವು, ಕಮ್ಯೂನಿಸ್ಟ್ ಸರಕಾರ ಬರುವ ಮೊದಲೇ ಇದ್ದಂತಹವು” ಎನ್ನುತ್ತಾ ದೀರ್ಘ ಉತ್ತರ ಕೊಟ್ಟಳು.

ನಮ್ಮೊಡನೆ ಬಂದಿದ್ದ ಶೆಟ್ಟಿ ದಂಪತಿ ಗಮನ ಸೆಳೆದರು. ಅವರಿಗೆ ಫೋಟೊದ ಹುಚ್ಚು. ಇಬ್ಬರೂ ಕೈಕೈ ಹಿಡಿದುಕೊಂಡೋ, ತಬ್ಬಿಕೊಂಡೋ, ಹೆಗಲ ಮೇಲೆ ಕೈ ಹಾಕಿಕೊಂಡೋ ಫೋಟೊ ತೆಗೆದುಕೊಳ್ಳುತ್ತಿದ್ದರು. ಅವರ ಮದುವೆಯಾಗಿ 40–50 ವರ್ಷಗಳಾಗಿರಬಹುದು. ಅವರಲ್ಲಿರುವ ಉತ್ಸಾಹ, ಪ್ರೀತಿ ಕಂಡು ಆಶ್ಚರ್ಯವಾಯಿತು. ಎಲ್ಲ ಅವರವರು ಕೇಳಿಕೊಂಡು ಬಂದಿದ್ದು. ನನ್ನ ಅಮ್ಮ ಅಪ್ಪನೂ ಹೀಗೆಯೇ ಅಲ್ಲವೇ, ಎಲ್ಲಿಗೆ ಹೋಗುವುದಾದರೂ ಒಟ್ಟಿಗೆ ಹೋಗಬೇಕು, ಒಟ್ಟಿಗೆ ಊಟ, ತಿಂಡಿ ಮಾಡಬೇಕು. ಆದರೂ ಒಬ್ಬರ ಮೇಲೆ ಒಬ್ಬರು ದೂರು ಹೇಳುವುದನ್ನು ಬಿಡುವುದಿಲ್ಲ. “ರಿಷಿಕಾ ಒಬ್ಬಳೇ ಬಂದಿದ್ದ? ಎಲ್ಲಿ ನಿನ್ನ ಗಂಡ? ಮದುವೆಯಾಗಿಲ್ಲವಾ ಹೇಗೆ” ಮಿಸೆಸ್ ಶೆಟ್ಟಿ ಕೇಳಿದಾಗ, “ನನ್ನ ಪ್ರಾಜೆಕ್ಟ್ ಮುಗಿದು ಕೆಲವು ದಿನಗಳ ರಜಾ ಸಿಕ್ಕಿತು. ನನ್ನ ಗಂಡ ಸದಾ ಬ್ಯೂಸಿ, ಜೆಸ್ಟ್ ಫಾರ್ ಚೇಂಜ್ ಟೂರಿಗೆ ಒಬ್ಬಳೇ ಬಂದೆ” ಸುಳ್ಳು ಹೇಳುವಾಗ ನಾಲಿಗೆ ತಡವರಿಸಿತು. “ಹೆಚ್ಚು ದಿನ ಬಿಟ್ಟಿರಬೇಡ, ಬೇರೊಬ್ಬಳನ್ನು ಹುಡುಕಿಕೊಂಡಾನು ನಿನ್ನ ಗಂಡ” ಮಿಸ್ಟರ್ ಶೆಟ್ಟಿ ತಮಾಷೆ ಮಾಡಿದರು. ದೂರದಲ್ಲಿದ್ದ ನಾಯಕ್, “ನಿನ್ನ ಗಂಡ ಡೈವೋರ್ಸ್ ಕೊಟ್ಟರೆ ಬೇಜಾರು ಮಾಡ್ಕೋಬೇಡ, ನಾನಿದ್ದೇನೆ” ಎನ್ನುತ್ತಾ ಕಣ್ಣು ಹೊಡೆದರು. ಸದಾ ತಮಾಷೆ ಮಾಡುವ ನಾಯಕ್ ಅಂಕಲಿನ ಹಿಂದೆ ದೊಡ್ಡ ಕರುಣಾಜನಕ ಕತೆಯೇ ಇದೆ ಎಂದು ಬಸ್ಸಿನಲ್ಲಿರುವ ಹೆಂಗಸರು ಮಾತಾಡಿಕೊಂಡಿದ್ದು ಕೇಳಿಸಿತ್ತು.

★★★

ಬೆಳಗ್ಗಿನ ನಮ್ಮ ಪ್ರಯಾಣ ‘ಹೊಂಗ್ಸು’ ಪಟ್ಟಣದತ್ತ. ಕೆಂಪು ಪ್ಯಾಂಟು, ಶರ್ಟಿನಲ್ಲಿದ್ದ ಶೆರ್ಲಿ ಪಕ್ಕಾ ಕಮ್ಯುನಿಸ್ಟ್ ಆಗಿ ತೋರುತ್ತಿದ್ದಳು. “ಹಿಂದಿ, ಚೀನಿ ಬಾಯಿ ಬಾಯಿ, ನೀವು, ನಾವು ಅಣ್ಣ ತಮ್ಮಂದಿರು, ಅಕ್ಕ ತಂಗಿಯರು” ಎನ್ನುವ ಭಾಷಣದೊಂದಿಗೆ ಶುರು ಮಾಡಿದಳು. ಬೆನ್ನಿಗೇ ಚೂರಿ ಹಾಕುವ